11	ಚಿತ್ರದುರ್ಗ	359.25	315.16
12	ದಕ್ಷಿಣ ಕನ್ನಡ	85.30	19.67
13	ದಾವಣಗೆರೆ	379.41	165.65
14	ಧಾರವಾಡ	232.06	214.90
15	ಗದಗ	433.04	283.74
16	ಗುಲ್ಬರ್ಗಾ	588.42	339.38
17	ಹಾಸನ	783.97	367.49
18	ಹಾವೇರಿ	578.57	228.27
19	ಕೊಡಗು	26.43	48.56
20	ಕೋಲಾರ	464.68	496.22
21	ಕೊಪ್ಪಳ	1054.09	722.50
22	ಮಧುಗಿರಿ	46.98	38.27
23	ಮಂಡ್ಯ	171.51	57.27
24	ಮೈಸೂರು	221.27	148.01
25	ರಾಯಚೂರು	202.37	689.79
26	ಶಿವಮೊಗ್ಗ	223.38	110.63
27	ತುಮಕೂರು	275.77	359.49
28	ಉಡುಪಿ	57.30	0.00
29	ಉತ್ತರ ಕನ್ನಡ	268.33	172.83

(ಷರಾ : ಜಿಲ್ಲಾವಾರು ವೆಚ್ಚದಲ್ಲಿ ಹಿಂದಿನ ವರ್ಷದ ಉಳಿಕೆ ಹಣ ಹಾಗೂ ರಾಜ್ಯದ ಪಾಲು ಸೇರಿರುತ್ತದೆ.)

667 (419) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) - ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006-07ನೇ ಸಾಲಿನಲ್ಲಿ ಈವರೆವಿಗೆ ರಾಜ್ಯದಲ್ಲಿ ಹಮ್ಮಿಕೊಳ್ಳಲಾದ ಎತ್ತು ಮತ್ತು ಬಂಡಿ ಒದಗಿಸುವ ಯೋಜನೆಯಲ್ಲಿ ಪ್ರಯೋಜನೆಯನ್ನು ಪಡೆದಿರುವ ರೈತ ಫಲಾನುಭವಿಗಳೆಷ್ಟು ;

ಆ) ಈ ಕಾರ್ಯಕ್ರಮಕ್ಕಾಗಿ ಸರ್ಕಾರವು ಒದಗಿಸಲಾದ ಅನುದಾನವೆಷ್ಟು ; ಇದರಲ್ಲಿ ಎಷ್ಟು ಅನುದಾನವನ್ನು ರೈತರಿಗೆ ವಿತರಿಸಲಾಗಿದೆ ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;

ಇ) ಇದರಲ್ಲಿ ಸರ್ಕಾರದ ಸಹಾಯಧನವೆಷ್ಟು ಹಾಗೂ ರೈತರು ನೀಡಬೇಕಾದ ಸಾಲದ ಮೊತ್ತವೆಷ್ಟು; ಇದನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತಿದೆ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) 4159 ರೈತರು ಈವರೆಗೆ ಇದರ ಪ್ರಯೋಜನ ಪಡೆದಿರುತ್ತಾರೆ.

ಆ) ಈ ಕಾರ್ಯಕ್ರಮಕ್ಕಾಗಿ ರೂ.2000.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಪೈಕಿ ಈವರೆಗೆ ರೂ.332.72 ಲಕ್ಷಗಳನ್ನು ರೈತರಿಗೆ ವಿತರಿಸಲಾಗಿದೆ. ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಸರ್ಕಾರದ ಸಹಾಯದನ ಪ್ರತಿ ಜೋಡಿ ಎತ್ತುಗಳಿಗೆ ಅಥವಾ ಒಂದು ಎತ್ತಿನಗಾಡಿಗೆ ಶೇಕಡಾ 50 ಅಥವಾ ಗರಿಷ್ಠ ರೂ. 10,000 ರೈತರು ತಮ್ಮ ಪಾಲನ್ನು ಸಾಲ ಪಡೆದಾಗಲೀ ಅಥವಾ ತಮ್ಮದೆ ಆದ ಸಂಪನ್ಮೂಲದಿಂದ ಭರಿಸಬಹುದಾಗಿದೆ. ಈ ಯೋಜನೆಯ ಅನುಷ್ಠಾನದ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ–1

ಕ್ರ.ಸಂ.	ಜಿಲ್ಲೆ	ನಿಗದಿಪಡಿಸಲಾದ ಹಣ(ರೂ.ಲಕ್ಷಗಳಲ್ಲಿ)	ಖಚಾದ ಹಣ (ರೂ.ಲಕ್ಷಗಳಲ್ಲಿ)
1.	ಬೆಂಗಳೂರು (ನ)	26.80	05.68
2.	ಬೆಂಗಳೂರು (ಗ್ರಾ)	99.40	35.28
3.	ಕೋಲಾರ	126.60	12.80
4.	ತುಮಕೂರು	120.40	05.52
5.	ಶಿವಮೊಗ್ಗ	55.80	20.72
6.	ಚಿತ್ರದುರ್ಗ	62.20	11.68
7.	ದಾವಣಗೆರೆ	69.80	36.88
8.	ಮೈಸೂರು	126.20	09.28
9.	ಚಾಮರಾಜನಗರ	60.20	00.00
10.	ಮಂಡ್ಯ	179.40	10.80
11.	ಕೊಡಗು	16.60	05.60
12.	ಹಾಸನ	149.00	19.76
13.	ಚಿಕ್ಕಮಗಳೂರು	60.80	07.60
14.	ದಕ್ಷಿಣ ಕನ್ನಡ	59.00	09.76
15.	ಉಡುಪಿ	63.80	00.00
16.	ಧಾರವಾಡ	23.60	02.08
17.	ಗದಗ	27.80	02.24
18.	ಹಾವೇರಿ	50.20	04.88

19.	ಉತ್ತರ ಕನ್ನಡ	56.20	02.00
20.	ಬೆಳಗಾಂ	129.40	44.64
21.	ಬಿಜಾಪುರ	50.20	09.60
22.	ಬಾಗಲಕೋಟೆ	44.20	10.88
23.	ರಾಯಚೂರು	65.00	00.00
24.	ಕೊಪ್ಪಳ	45.40	07.84
25.	ಬಳ್ಳಾರಿ	57.00	22.80
26.	ಗುಲ್ಬರ್ಗಾ	117.60	34.40
27.	ಬೀದರ್	54.40	00.00
	ಒಟ್ಟು	**2000.00**	**332.72**

ಅನುಬಂಧ-2

ಎತ್ತು ಮತ್ತು ಎತ್ತಿನ ಗಾಡಿ ಯೋಜನೆಯ ಅನುಷ್ಠಾನಗೊಳಿಸುವ ವಿವರಗಳು

ಈ ಯೋಜನೆಯಡಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮಾತ್ರ ಸೌಲಭ್ಯ ದೊರಕಿಸಲು ಅವಕಾಶವಿರುವುದು.

ಅ. ನೋಂದಾಣಿ

೧. ಫಲಾನುಭವಿಗಳು 5 ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿರತಕ್ಕದ್ದು.

೨. ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಶಾನಕರು ಅಧ್ಯಕ್ಷರಾಗಿರುವ ಆಯ್ಕೆ ಸಮಿತಿ ವಹಿಸಲಾಗಿದೆ.

೩. ಅರ್ಜಿದಾರರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳ ಮೂಲಕ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಉಚಿತವಾಗಿ ರೈತ ಸಂಪರ್ಕ ಕೇಂದ್ರಗಳು ರೈತರಿಗೆ ಒದಗಿಸತಕ್ಕದ್ದು. ಅರ್ಜಿಯೊಂದಿಗೆ ಹಿಡುವಳಿ/ಖಾತಾಪತ್ರ ಲಗತ್ತಿಸುವುದು. ಮತ್ತು ಬ್ಯಾಂಕುಗಳಿಂದ ಸಾಲ ಪಡೆಯಲು ಇಚ್ಛೆ ಪಡುವ ರೈತರು ಬ್ಯಾಂಕುಗಳು ನಿಗಧಿಪಡಿಸಿದ ದಾಖಲೆಗಳನ್ನು ಅರ್ಜಿಯ ಜೊತೆ ಸಲ್ಲಿಸುವುದು.

೪. ರೈತ ಸಂಪರ್ಕ ಕೇಂದ್ರದಿಂದ ಸ್ವೀಕರಿಸಿದ ಅರ್ಜಿಗಳನ್ನು ಒಂದುವಾರದೊಳಗಾಗಿ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ತಾಲ್ಲೂಕು ಸಹಾಯಕಕೃಷಿ ನಿರ್ದೇಶಕರುಗಳಿಗೆ ಸಲ್ಲಿಸತಕ್ಕದ್ದು.

೫. ಸದಸ್ಯ ಕಾರ್ಯದರ್ಶಿಗಳು ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗೆ ಅಗತ್ಯಾನುಸಾರ ಸಮಿತಿಯ ಮುಂದೆ ಮಂಡಿಸತಕ್ಕದ್ದು.

೬. ಸಮಿತಿಯು ಅಂತಿಮಗೊಳಿಸಿದ ಫಲಾನುಭವಿಗಳಿಗೆ ನಿಗಧಿತ ಸೌಲಭ್ಯಗಳನ್ನು ಒದಗಿಸಲು ರೈತರು ಆಯ್ಕೆ ಮಾಡಿದ ಅಥವಾ ಸಂಬಂಧಪಟ್ಟ ಬ್ಯಾಂಕುಗಳಿಗೆ ಸಾಲ-ಸೌಲಭ್ಯಕ್ಕಾಗಿ ಅರ್ಜಿಗಳನ್ನು ತಕ್ಷಣ ಕಳುಹಿಸಿಸತಕ್ಕದ್ದು ಮತ್ತು ಫಲಾನುಭವಿಗಳ ಪಟ್ಟಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು.

ಆ. ಎತ್ತುಗಳ ಖರೀದಿ:

೧. ಎತ್ತುಗಳನ್ನು ಖರೀದಿಸಲು ಬ್ಯಾಂಕಿನ ಸಾಲ ಪಡೆಯುವುದಾದಲ್ಲಿ ಬ್ಯಾಂಕಿನ ಮಂಜೂರಾತಿ ಪತ್ರವನ್ವಯ ಶೇಕಡಾ ೫೦ ಸಹಾಯಧನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಜಮಾ ಮಾಡಬೇಕು ಅಥವಾ

೨. ಸ್ವಂತ ಮೂಲಗಳಿಂದ ಖರೀದಿಸಿದ್ದಲ್ಲಿ ಸಹಾಯಧನದ ಬಾಬ್ತನ್ನು ಎ.ಪಿ. ಬಿಲ್ಲಿನ ಮೇಲೆ ಪಡೆದು ಸಂದಾಯಕ್ಕೆ ಕ್ರಮ ವಹಿಸಬೇಕು.

೫. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಹಿರಿಯ ಸಹಾಯಕ ಕೃಷಿ ನಿರ್ದೇಶಕರು, ಪಶುಸಂಗೋಪನೆ ಮತ್ತು ವೈದ್ಯಕೀಯ ಸೇವೆಗಳ ಇಲಾಖೆ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಸಂಬಂಧಪಟ್ಟ ಬ್ಯಾಂಕಿನ ಪ್ರತಿನಿಧಿ ಮತ್ತು ಕೃತಕ ಸಂಪರ್ಕ ಕೇಂದ್ರದ ಮುಖ್ಯಸ್ಥರನ್ನು ಒಳಗೊಂಡ ಸಮಿತಿಯು ಫಲಾನುಭವಿಯ ಚಿಕಿತ್ಸೆ ಮೇರೆಗೆ ಸಂಬಂಧಪಟ್ಟ ಕೃಷಿಉತ್ಪನ್ನವನ್ನು ಮಾರುಕಟ್ಟೆ ಸಮಿತಿ ವ್ಯಾಪ್ತಿಯ ಸಂತೆ/ಜಾತ್ರೆಯವರು ಗರಿಷ್ಠ ಅವಧಿಯಲ್ಲಿ ಖರೀದಿಗೆ ಕ್ರಮವಹಿಸಬೇಕು.

೪. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧಿಕೃತ ಪಾವತಿ , ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯ ಅಧಿಕಾರಿಗಳ ಪ್ರಮಾಣ ಪತ್ರ ಮತ್ತು ಗುರುತಿನ ಮುದ್ರೆ , ದಾಖಲೆ, ವಿಮಾ ಕಂಪನಿಯ ಚಂದಾ ಹಣ ರಶೀದಿ ಮತ್ತು ಖರೀದಿ ಬಗ್ಗೆ ಛಾಯಾ ಚಿತ್ರಗಳನ್ನು ಆಧರಿಸಿ ಎತ್ತುಗಳ ಮಾರಾಟಗಾರರಿಗೆ ಪೂರ್ಣ ಹಣವನ್ನು ಸಂದಾಯ ಮಾಡತಕ್ಕದ್ದು.

೫. ಹಣ ಸಂದಾಯ ಮಾಡುವಾಗ ಎತ್ತುಗಳ ವಾಸ್ತವ ಬೆಲೆಯ ಶೇಕಡಾ 50 ಗರಿಷ್ಠ ರೂ.10000/-ಗಳ ಮಿತಿಯಲ್ಲಿ ಇರುವಂತೆ ಕ್ರಮವಹಿಸಬೇಕು. ವಿಮಾ ಹಣದ ಮೊತ್ತವನ್ನು ಫಲಾನುಭವಿಗಳು ಸ್ವಂತ ಖರ್ಚಿನಲ್ಲಿ ಅಥವಾ ಬ್ಯಾಂಕುಗಳ ಮೂಲಕ ಭರಿಸತಕ್ಕದ್ದು.

೬. ಎತ್ತುಗಳನ್ನು ಫಲಾನುಭವಿ ಪಡೆದ ಬಗ್ಗೆ ಅಧಿಕೃತ ಸ್ವೀಕೃತಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ರಿಯಾಯಿತಿ ದಾಸ್ತಾನು ವಹಿಯಲ್ಲಿ ನಮೂದಿಸತಕ್ಕದ್ದು.

೭. ಎತ್ತುಗಳನ್ನು ಮುಂದಿನ ಐದು ವರ್ಷಗಳ ವರೆಗೆ ಪರಭಾರೆ/ಮಾರಾಟ ಮಾಡದಿರುವ ಬಗ್ಗೆ ಫಲಾನುಭವಿಗಳಿಂದ ಮುಚ್ಚಳಿಕೆ ಪತ್ರ ಪಡೆದು ಸಂಬಂಧಪಟ್ಟ ಬಿಲ್ಲಿನೊಂದಿಗೆ ಲಗತ್ತಿಸಬೇಕು.

೮. ಎತ್ತಿನ ಗಾಡಿ ಸೂಚನೆಗಳು

೧. ಆಯ್ಕೆಯಾದ ಫಲಾನುಭವಿಯು ಜಿಲ್ಲಾ ಕೃಷಿ ಉಪಕರಣಗಳ ಸಮಿತಿಯು ಅನುಮೋದಿಸಿದ ಸಂಸ್ಥೆಗಳಿಂದ ಹಾಗೂ ಅನುಮೋದಿಸಿದ ದರದಂತೆ ಮಾತ್ರ ಎತ್ತಿನ ಗಾಡಿಯನ್ನು ಖರೀದಿಸತಕ್ಕದ್ದು.

೨. ಬ್ಯಾಂಕಿನ ಸಾಲ ಪಡೆಯುವುದಾದಲ್ಲಿ ಬ್ಯಾಂಕಿನ ಮಂಜೂರಾತಿ ಪತ್ರದನ್ವಯ ಶೇಕಡಾ ೫೦ ಸಹಾಯಧನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು . ಅಥವಾ

೩. ಸ್ವಂತ ಮೂಲಗಿಂದ ಸಂಬಂಧಪಟ್ಟ ಎತ್ತಿನಗಾಡಿ ಪೂರೈಕೆ ಕುರಿತು ಅನುಮೋದಿತ ಸಂಸ್ಥೆಗೆ ಸಂದಾಯ ಮಾಡಿದ್ದಲ್ಲಿ ಸಹಾಯಧನದ ಬಾಬ್ತನ್ನು ಎ.ಸಿ. ಬಿಲ್ಲಿನ ಮೇಲೆ ಪಡೆದು ಸಂದಾಯಕ್ಕೆ ಕ್ರಮವಹಿಸಬೇಕು ಮತ್ತು ಎತ್ತಿನ ಗಾಡಿಯ ಮೇಲೆ ಸ್ಪಷ್ಟವಾಗಿ ಕಾಣುವಂತೆ ಕೃಷಿ ಇಲಾಖೆ ---------- ತಾಲ್ಲೂಕು ಇವರಿಂದ ರಿಯಾಯಿತಿ ಸೌಲಭ್ಯ ಪಡೆಯಲಾಗಿದೆ ಎಂದು ಅಚ್ಚು ಮಾಡಿಸತಕ್ಕದ್ದು.

೪. ಎತ್ತಿನಗಾಡಿಯ ವಾಸ್ತವಿಕ ಬೆಲೆಯ ಶೇಕಡಾ 50 ಗರಿಷ್ಠ ರೂ.10000/- ಬಾಬ್ತನ್ನು ಮಾತ್ರ ಸಂದಾಯ ಮಾಡಲು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಕ್ರಮ ವಹಿಸಬೇಕು. ಎತ್ತಿನ ಗಾಡಿಯನ್ನು ಫಲಾನುಭವಿಯು ಪಡೆದಬಗ್ಗೆ ಛಾಯಾಚಿತ್ರವನ್ನು ಸಹ ಸಂಬಂಧಪಟ್ಟ ಬಿಲ್ಲಿನೊಂದಿಗೆ ಲಗತ್ತಿಸಬೇಕು.

೫. ಎತ್ತಿನ ಗಾಡಿಯನ್ನು ಮುಂದಿನ ಐದು ವರ್ಷಗಳ ವರೆಗೆ ಪರಬಾರೆ/ಮಾರಾಟ ಮಾಡದಿರುವ ಬಗ್ಗೆ ಫಲಾನುಭವಿಗಳಿಂದ ಮುಚ್ಚಳಿಕೆ ಪತ್ರ ಪಡೆದು ಸಂಬಂಧಪಟ್ಟ ಜಿಲ್ಲೆಯೊಂದಿಗೆ ಲಗತ್ತಿಸಬೇಕು.

ಯೋಜನೆಯ ಅನುಷ್ಠಾನದ ಹಂತದಲ್ಲಿ ಸರ್ಕಾರವು ನಿಗಧಿಪಡಿಸಿದ ರಿಯಾಯಿತಿಯಲ್ಲಿ ಎತ್ತು ಮತ್ತು ಎತ್ತಿನಗಾಡಿಗಳನ್ನು ಫಲಾನುಭವಿಗಳು ಸಮರ್ಪಕವಾಗಿ ಬಳಸುವಂತೆ ತಿಳುವಳಿಕೆ ನೀಡುವುದರೊಂದಿಗೆ ಸಕಾಲದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

.ಅರ್ಹತೆ / ಷರತ್ತುಗಳು

೧. ಎತ್ತು ಅಥವಾ ಎತ್ತಿನಗಾಡಿ ಹೊಂದಿಲ್ಲದಿರುವ ಸಣ್ಣ ಮತ್ತು ಅತಿಸಣ್ಣ ರೈತರು ಮಾತ್ರ ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.

೨. ಕುಟುಂಬದಲ್ಲಿನ ಒಬ್ಬರು ಮಾತ್ರ ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುತ್ತಾರೆ.

೩. ಸರ್ಕಾರದ ಜಮೀನನ್ನು ಅಕ್ರಮ ಸಾಗುವಳಿ ಮಾಡುವವರು (ಸಕ್ರಮಗೊಂಡಿರುವ ಪ್ರಕರಣಗಳನ್ನು ಹೊರಡುವಡಿಸಿ) ಈ ಯೋಜನೆಗೆ ಅರ್ಹರಾಗಿರುವುದಿಲ್ಲ.

೪. ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಶಾಸಕರು ಅಧ್ಯಕ್ಷರಾಗಿರುವ ಸಮಿತಿಗೆ ವಹಿಸಲಾಗಿದೆ.

೫. ಈ ಯೋಜನೆಯ ಅಡಿಯಲ್ಲಿ ಫಲಾನುಭವಿಗಳಿಗೆ ಎತ್ತು ಇಲ್ಲದಿದ್ದಲ್ಲಿ ಒಂದು ಜೊತೆ ಎತ್ತು ಪಡೆಯಲು ಶೇಕಡಾ 50 ರಿಯಾಯಿತಿಯಂತೆ ಗರಿಷ್ಠ ರೂ.10,000/- ಗಳು ಮಾತ್ರ. ಎತ್ತಿನ ಗಾಡಿ ಇಲ್ಲದಿದ್ದಲ್ಲಿ ಒಂದು ಎತ್ತಿನಗಾಡಿ ಪಡೆಯಲು ಶೇಕಡಾ 50 ರಿಯಾಯಿತಿಯಂತೆ ಗರಿಷ್ಠ ರೂ.10,000/- ಗಳು ಮಾತ್ರ. ಎತ್ತು ಅಥವಾ ಎತ್ತಿನ ಗಾಡಿ ಪೈಕಿ ಒಂದರ ಪ್ರಯೋಜನವನ್ನು ಮಾತ್ರ ಫಲಾನುಭವಿಗಳು ಪಡೆಯಲು ಅರ್ಹರಾಗಿರುತ್ತಾರೆ.

೬. ಎತ್ತಿನಗಾಡಿ ಕೊಡುವಾಗ ಎತ್ತು ಹೊಂದಿರುವ ಕುಟುಂಬಕ್ಕೆ ಆದ್ಯತೆ ನೀಡತಕ್ಕದ್ದು.

೭. ಅರ್ಜಿದಾರರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳ ಮೂಲಕ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ರೈತ ಸಂಪರ್ಕ ಕೇಂದ್ರದಿಂದ ಸದರಿ ಅರ್ಜಿಗಳನ್ನು ಒಂದು ವಾರದೊಳಗಾಗಿ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸತಕ್ಕದ್ದು.

೯. ಫಲಾನುಭವಿಗಳ ಆಯ್ಕೆ ಕುರಿತಂತೆ ರಚನೆಯಾದ ಸಮಿತಿಯು ಕಾಲಕಾಲಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಕನಿಷ್ಠಾತಿಕನಿಷ್ಠ ಸಂಪನ್ಮೂಲ ಹೊಂದಿರುವ ರೈತರನ್ನು ಆದ್ಯತಾನುಸಾರ ಆಯ್ಕೆ ಮಾಡತಕ್ಕದ್ದು. ಹಾಗೂ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಅಲ್ಪಸಂಖ್ಯಾತರು/ ಹಿಂದುಳಿದ ವರ್ಗಗಳ ರೈತರಿಗೆ ಆಯ್ಕೆ ಮಾಡತಕ್ಕದ್ದು.

೬. ಎತ್ತುಗಳನ್ನು ಸ್ಥಳೀಯ ಕೃಷಿ ಮಾರುಕಟ್ಟೆ ಸಮಿತಿಯ ನಿಯಮಗಳಿಗೆ ಅನುಗುಣವಾಗಿ ಖರೀದಿಸಿ ಪಶುಪಂಗೋಷಣೆ ಮತ್ತು ಪಶುವೈದ್ಯಕೀಯ ಇಲಾಖೆಯ ಪ್ರಮಾಣ ಪತ್ರದೊಂದಿಗೆ ಗುರುತಿನ ಮುದ್ರೆಯನ್ನು ಹಾಕಿಸಿ ಫಲಾನುಭವಿಗಳು ಪಡೆಯತಕ್ಕದ್ದು. ಎತ್ತಿನಗಾಡಿಗಳನ್ನು ಜಿಲ್ಲಾ ಕೃಷಿ ಉಪಕರಣಗಳ ಸಮಿತಿ ಅನುಮೋದಿಸಿದ ತಯಾರಕರಿಂದ ಖರೀದಿಸತಕ್ಕದ್ದು.

೧೦. ಯಾವುದೇ ಕಾರಣಕ್ಕು ಈ ಯೋಜನೆಯಡಿ ಪಡೆದ ಎತ್ತು ಮತ್ತು ಎತ್ತಿನಗಾಡಿಗಳನ್ನು ಐದು ವರ್ಷಗಳ ವರೆಗೆ ಪರಭಾರೆ ಅಥವಾ ಮಾರಾಟ ಮಾಡಬಾರದು.

668 (1142) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೊಬ್ಬರಿ ಖರೀದಿಗೆ ಬೆಂಬಲ ಬೆಲೆಯನ್ನು ಸರ್ಕಾರ ನಿಗದಿಪಡಿಸಿದೆಯೇ ; ಹಾಗಿದ್ದಲ್ಲಿ, ಬೆಂಬಲ ಬೆಲೆ ಎಷ್ಟು ;

ಆ) ರಾಜ್ಯದಲ್ಲಿ ಇತ್ತೀಚೆಗೆ ಕೊಬ್ಬರಿ ಖರೀದಿಗೆ ಚಳವಳಿ ನಡೆಸಿ ಗಡುವು ನೀಡಿದ್ದು ವಿವಿಧ ತೆಂಗಿನ (ಕೊಬ್ಬರಿ) ಮಾರುಕಟ್ಟೆಗಳಲ್ಲಿ ಗಲಾಟೆ ನಡೆಯುತ್ತಿರುವುದು ನಿಜವೇ ;

ಇ) ಈ ಬೆಂಬಲ ಬೆಲೆಯಿಂದಾಗಿ ರೈತರಿಗೆ ಸಿಗುವ ಲಾಭ ಎಷ್ಟು ;

ಈ) ಟೆಂಡರ್ ಆದ ನಂತರ ಬಿಲ್ ತೋರಿಸಿದಲ್ಲಿ ಹಣ ಪಾವತಿ ಮಾಡುವಂತೆ ಸೂಚಿಸಲಾಗಿದೆಯೇ ;

ಉ) ನಾಫೆಡ್ ಮೂಲಕ ನೇರ ಖರೀದಿಗೆ ಸರ್ಕಾರ ಮುಂದಾಗುವುದೇ ; ಇಲ್ಲದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ನಿಲುವು ಏನು ;

ಊ) ರೈತರ ನಿಯೋಗಕ್ಕೆ ಸರ್ಕಾರ ನೀಡಿರುವ ಭರವಸೆ ಏನು; ಭರವಸೆಯನ್ನು ಈಡೇರಿಸಲಾಗುವುದೇ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)–

ಅ) ಕೊಬ್ಬರಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ. 2006–07ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಪ್ರತಿ